ರಜೆಗಳ ಸುದ್ದಿಯೇ ಇರುವುದಿಲ್ಲ. ಒಬ್ಬೊಬ್ಬ ಡ್ರೈವರ್ ತಿಂಗಳುಗಟ್ಟಲೆ ಹೆಂಡತಿ ಮಕ್ಕಳನ್ನು ಬಿಟ್ಟು ಕೆಲಸ ಮಾಡುತ್ತಿದ್ದರೆ ಓ.ಟಿ. ಹಣಕ್ಕೋಸ್ಕರ ಅವರು ಹೀಗೆ ಮಾಡುತ್ತಾರೆ ಎನಿಸುತ್ತಿತ್ತು. ಇವರಿಗೆ ಹೆಂಡತಿ ಮಕ್ಕಳು ಇದ್ದಾರಾ ಅನಿಸುತ್ತಿತ್ತು. ಆದರೆ ಯಾರ ಕಷ್ಟ ಅವರದು, ನನ್ನ ಸಂಪಾದನೆಯ ಮೇಲೆ ಅವಲಂಬಿಸುವವರು ಯಾರೂ ಇಲ್ಲವಾದ್ದರಿಂದ, ಈಗ ನನಗೆ ಆ ಪರಿಸ್ಥಿತಿ ಅರ್ಥವಾಗದಿರಬಹುದು. ಈಗ ಬಹುತೇಕ ಶೂನ್ಯದತ್ತ ನೋಡುವುದು ಅಭ್ಯಾಸವಾಗಿದೆ, ಅದು ನನ್ನ ಉದ್ಯೋಗ ಧರ್ಮ. ಪ್ರತಿಬಾರಿ ಒಬ್ಬ ಹೊಸ ಡ್ರೈವರೊಂದಿಗೆ ಕೆಲಸ ಮಾಡುವುದರಿಂದ, ಅವರ ಕಷ್ಟ ಸುಖ ನನ್ನೊಂದಿಗೆ ಹೇಳಿಕೊಳ್ಳುತ್ತಿದ್ದರು. ಒಬ್ಬೊಬ್ಬರದೂ ವಿಭಿನ್ನ ಮನಸ್ಥಿತಿ, ಒಬ್ಬೊಬ್ಬರಿಗೆ ಒಂದೊಂದು ಸಮಸ್ಯೆ! ಮುಖ್ಯವಾಗಿ ಅವರೆಲ್ಲರೂ ಕಷ್ಟಪಡುವುದು ಅವರ ಕುಟುಂಬ, ಮಕ್ಕಳು ಮತ್ತು ಅವರ ಓದಿಗಾಗಿ ಎನ್ನುವುದು ನನಗೆ ಅರ್ಥವಾಯಿತು.

ನನ್ನ ಟ್ರೈನಿಂಗ್‌ನಲ್ಲಿ ನನಗೆ ಬಹಳ ಹತ್ತಿರವಾದ ವ್ಯಕ್ತಿ ಯೂನಿಯನ್ ಲೀಡರ್ ಸತ್ಯಂ. ಹತ್ತಾರು ಮಂದಿಗೆ ಸೇವೆ ಮಾಡುವುದಕ್ಕಿಂತಲೂ ಸಂತೋಷ ಮತ್ತೊಂದೇನಿರುತ್ತದೆ ಎನ್ನುತ್ತಿದ್ದ. ವೃತ್ತಿ ವಿಷಯಕ್ಕಿಂತಲೂ, ಕುಟುಂಬ ಪೋಷಣೆ, ಮಕ್ಕಳ ಪಾಲನೆ, ಜೀವನವೆಂದರೆ ಏನು – ಹೀಗೆ ಸಾಕಷ್ಟು ವಿಷಯಗಳನ್ನು ಸತ್ಯಂ ಜೀವನದಿಂದ ಕಲಿತೆ. ಬಹಳ ದಿನಗಳ ನಂತರ ಮತ್ತೆ ಈಗ ಸತ್ಯಂ ಜೊತೆ ಕೆಲಸ ಮಾಡುತ್ತಿದ್ದೇನೆ. ಹಾಗೇ ಗಾಳಿ, ಕತ್ತಲಿಗೆ ಒಡ್ಡಿಕೊಳ್ಳುತ್ತಿದ್ದರೆ ನನ್ನ ಆಲೋಚನೆಗಳೆಲ್ಲ ಡ್ರೈವರ್ ಸತ್ಯಂ ಸುತ್ತಲೂ ತಿರುಗುತ್ತಿವೆ.

ಡ್ರೈವರ್ ಸತ್ಯಂ, ಡಿಪಾರ್ಟ್‌ಮೆಂಟಿನಲ್ಲಿ ಒಳ್ಳೆಯ ಹೆಸರಿರುವ ಡ್ರೈವರ್. ತನ್ನ ಸಹ ಕಾರ್ಮಿಕರ ಕಷ್ಟಗಳನ್ನು ತನ್ನದೆಂಬಂತೆ ಭಾವಿಸುತ್ತಿದ್ದನು. ಸಮಸ್ಯೆ ಪರಿಹಾರವಾಗುವವರೆಗೂ ಹೋರಾಡುತ್ತಿದ್ದನು. ಯಾವಾಗಲೂ ಚುರುಕಾಗಿ, ಹುಷಾರಾಗಿ ಅದೂ ಇದೂ ಮಾತನಾಡುತ್ತ ಎಂಜಿನ್ ಚಲಾಯಿಸುತ್ತಿದ್ದ. ರೈಲ್ ಎಂಜಿನ್ ಓಡಿಸುವುದರಲ್ಲಿ ಎತ್ತಿದಕೈ, ಇದುವರೆಗೂ ಯಾವುದೇ ದೂರುಗಳಿಲ್ಲ. ಯಾವಾಗಲೂ ತನ್ನ ಮಗ, ಮಗಳ ಭವಿಷ್ಯತ್ತಿನ ಕುರಿತು ಮಾತನಾಡುತ್ತಿದ್ದನು. ಅವನ ಕಷ್ಟವೆಲ್ಲ ಅವರ ಸುಖಕ್ಕಾಗಿಯೇ ಎಂದು ಅನಿಸುತ್ತಿತ್ತು. ದೊಡ್ಡ ಮಗಳ ಪದವಿ ಮುಗಿಯುತ್ತಲೇ ಮದುವೆ ಮಾಡಿದನು. ಎರಡನೇ ಮಗಳು ಇಂಟರ್ ಮೀಡಿಯಟ್, (ಪಿಯುಸಿ), ಮಗ ಪದವಿ ಮುಗಿಸಿದ್ದಾನೆ. ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳುತ್ತೇನೆಂದರೆ ಮಾಸ್ಟರ್ಸ್ ಓದಿಕೊಳ್ಳುವಂತೆ ಪ್ರೋತ್ಸಾಹಿಸಿ ಉದ್ಯೋಗದ ಮಾತೆತ್ತದಂತೆ ಮಾಡಿದನಂತೆ. ಚಿಕ್ಕ ಮಗಳನ್ನು ವೈದ್ಯಕೀಯ ವ್ಯಾಸಂಗ ಮಾಡಿಸಬೇಕೆಂದು ದಿನಕ್ಕೆ ಒಮ್ಮೆಯಾದರೂ ಯೋಚಿಸದಿರುವುದಿಲ್ಲ. ಅಂತಹ ತಂದೆ ಸಿಗಲು ಆ ಮಕ್ಕಳು ಸಾಕಷ್ಟು ಅದೃಷ್ಟ ಮಾಡಿದ್ದಾರೆ ಎಂದುಕೊಳ್ಳುತ್ತಿದ್ದೆ. ಮಕ್ಕಳ ಮೇಲಿನ ಆತನ ಪ್ರೀತಿ ನೋಡಿ, ಅವರ ಕುರಿತು ಹೇಳುವಾಗ ಅವನ ಕಣ್ಣಿನಲ್ಲಿ ಸಂತೋಷ ನೋಡಿ ನನಗೆ ಖುಷಿಯಾಗುತ್ತಿತ್ತು. ಕೆಲವೊಮ್ಮೆ ಕಿರಿಕಿರಿಯೆನಿಸಿದರೂ ಅವನ ಪ್ರೇಮದ ಕುರಿತು ಅನುಕಂಪ ಮೂಡುತ್ತಿತ್ತು. ಮಕ್ಕಳ ಹಾಸ್ಟೆಲ್ ಶುಲ್ಕ, ಕಾಲೇಜು ಶುಲ್ಕ ಕಟ್ಟಬೇಕಾದಾಗ ಹೆಚ್ಚು ಓ.ಟಿ. ಡ್ಯೂಟಿ ಮಾಡುತ್ತಿದ್ದನು. ಅವರ ಆಟಪಾಠಗಳು, ಓದು, ಅವರ ಅಂಕಗಳು, ಅವರ ಉಡುಗೆ ತೊಡುಗೆಯ ಅಭ್ಯಾಸಗಳು ಹೀಗೆ ಎಲ್ಲವನ್ನೂ ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದ. ಸತ್ಯಂ ತನ್ನ ಕುಟುಂಬದ ಕ್ಷೇಮಕ್ಕಾಗಿ, ತನ್ನ ಮಕ್ಕಳ ಭವಿಷ್ಯತ್ತಿಗಾಗಿ ಯಾವುದಕ್ಕೂ ಹಿಂದೇಟು ಹಾಕುವುದಿಲ್ಲವೆಂಬುದು ಮಾತ್ರ ನನಗೆ ಸ್ಪಷ್ಟವಾಗಿ ಅರ್ಥವಾಯಿತು.

ಮಗ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕೆ ದಾಖಲಾತಿ ಪಡೆದ. ಮಗಳಿಗೆ ನಾನ್ ಪೇಮೆಂಟ್ ಕೋಟಾದಲ್ಲಿ ಮೆಡಿಕಲ್ ಸೀಟು ಸಿಕ್ಕಿತು. ಈಗ ಸತ್ಯಂಗೆ ಬಹಳ ಸಂತೋಷ. ಸ್ಟೇಷನ್ನಿನಲ್ಲಿ ಕಂಡ ಎಲ್ಲರಿಗೂ ಸ್ವೀಟ್ ಹಂಚುತ್ತ ಖುಷಿಯಾಗಿದ್ದಾನೆ. ನನಗೆ ವಿಶೇಷವಾಗಿ ಒಂದು ಸ್ವೀಟ್ ಬಾಕ್ಸ್ ನೀಡಿದ. ಇತರ ಡ್ರೈವರ್‌ಗಳು ಸತ್ಯಂ ಕುರಿತು ಸಾಕಷ್ಟು ಒಳ್ಳೆಯ ಮಾತನಾಡಿದ್ದರು. ಯೂನಿಯನ್ ವಿರುದ್ಧ ಹೋರಾಡಿ ಸಾಧಿಸಿದ ಜಯ, ಸಹ ಕಾರ್ಮಿಕರು ಸಂಕಷ್ಟಕ್ಕೀಡಾದಾಗ, ಆಕ್ಸಿಡೆಂಟ್ ಆದಾಗ ಅವರಿಗೆ ಸಹಾಯಹಸ್ತ ಚಾಚಿದ್ದು ಎಲ್ಲ ವಿಷಯಗಳನ್ನು ಹೇಳುತ್ತಿದ್ದರು.

ಬಹಳ ಛಲವಾದಿ. ಸಮಸ್ಯೆ ಬಗೆಹರಿಯುವವರೆಗೂ ಪಟ್ಟುಬಿಡದೆ ಒಡೆತನದ ಮುಖ್ಯಸ್ಥರೊಂದಿಗೆ ಹೋರಾಡುತ್ತಿದ್ದನು. ಮಗಳ ಓದಿಗೋಸ್ಕರ, ವಿಶ್ವವಿದ್ಯಾಲಯಕ್ಕೆ ಹತ್ತಿರವಿರಲು ಇತ್ತೀಚೆಗೆ ಟ್ರಾನ್ಸ್‌ಫರ್‌ಗಾಗಿ ಪ್ರಯತ್ನಿಸುತ್ತಿದ್ದಾನೆ. ಆದರೆ ಸ್ಟೇಷನ್ನಿನಲ್ಲಿ ಒಳ್ಳೆಯ ಹೆಸರಿರುವ



ಆತನನ್ನು ಬಿಟ್ಟುಕೊಡಲು ಮುಖ್ಯಸ್ಥರಿಗೆ ಇಷ್ಟವಿಲ್ಲ. ಬೇಕೆಂತಲೇ ಮುಂದೆ ಹಾಕುತ್ತಿದ್ದಾರೆ. ಮೊದಲೇ ಟ್ರಾನ್ಸ್‌ಫರ್ ಮಾಡುತ್ತಿಲ್ಲವೆಂಬ ಕೋಪದೊಂದಿಗೆ, ಇತ್ತೀಚೆಗೆ ಡ್ಯೂಟಿಯಲ್ಲಿ ಆದ ಒಂದು ಅಪಘಾತದಲ್ಲಿ ಕಾಲು ಕಳೆದುಕೊಂಡ ಸಹ ಕಾರ್ಮಿಕನಿಗೆ ಬರಬೇಕಿದ್ದ ನಷ್ಟ ಪರಿಹಾರ ಮೂರು ತಿಂಗಳಾದರೂ ಬರದಿರುವ ಸಿಟ್ಟೂ ಸೇರಿಕೊಂಡು ಮುಖ್ಯಸ್ಥರನ್ನು ನೇರವಾಗಿ ಪ್ರಶ್ನಿಸಿದನು. ಪರಿಣಾಮವಾಗಿ, ಸಂಸ್ಥೆಯೊಂದಿಗೆ ಒರಟಾಗಿ ನಡೆದುಕೊಂಡನೆಂದು ಸಸ್ಪೆಂಡ್ ಮಾಡಲಾಯಿತು. ಆದರೆ ಮೇಲಧಿಕಾರಿಗಳ ಒತ್ತಡದಿಂದಾಗಿ ಟ್ರಾನ್ಸ್‌ಫರ್ ಅನ್ನು ತಡೆಯಲಾಗಲಿಲ್ಲ. ಕಾಜೀಪೇಟ್ ಜಂಕ್ಷನ್‌ಗೆ ಟ್ರಾನ್ಸ್‌ಫರ್ ಆಯಿತು. ಆದರೆ ಕೈಗೆ ನೀಡಬೇಕಿದ್ದ ರಿಲೀವಿಂಗ್ ಲೆಟರ್‌ನ್ನು ಪೋಸ್ಟ್ ಮಾಡಿದ್ದೇವೆಂದರು. ಕ್ಷಮಾಪಣೆ ಹೇಳಿದರೆ ಸಸ್ಪೆನ್ಷನ್ ಹಿಂಪಡೆಯುತ್ತೇವೆಂದರು, ಆದರೆ ಬಹಳ ಹಟವಾದಿ. ಮೊದಲು ಆ ಬಾಧಿತ ಕಾರ್ಮಿಕನಿಗೆ ನಷ್ಟಪರಿಹಾರ ಕೊಡಲೇಬೇಕೆಂದು ಪಟ್ಟುಹಿಡಿದನು. ಆ ಸಸ್ಪೆನ್ಷನ್ ಮುಂದುವರಿದಿದೆ.

ಸುಮಾರು ಏಳು ತಿಂಗಳಿನಿಂದ ಸಂಬಳವಿಲ್ಲ, ಮಕ್ಕಳ ಓದಿಗೆ ತೊಂದರೆಯಾಗುತ್ತಿದೆ. ಆದರೂ ಕ್ಷಮಾಪಣೆ ಮಾತ್ರ ಹೇಳುತ್ತಿಲ್ಲ, ತನ್ನ ತಪ್ಪೇನಿಲ್ಲ ಎನ್ನುತ್ತಾನೆ ಸತ್ಯಂ. ಕಷ್ಟಕಾಲದಲ್ಲಿ ಆಡಳಿತದ ಮುಖ್ಯಸ್ಥರು ಹೀಗೆ ತೊಂದರೆ ಕೊಡುವುದು ಎಷ್ಟು ಸರಿ ಎನ್ನುತ್ತಾನೆ. ಆತನ ವಾದದಲ್ಲಿ ತಪ್ಪಿಲ್ಲ. ನೇರವಾಗಿ ಕಾಜಿಪೇಟ್ ಜಂಕ್ಷನ್‌ಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಲು ಹೋದರೆ, ಅಲ್ಲಿ ರಿಲೀವಿಂಗ್ ಲೆಟರ್ ಬೇಕೆಂದು ಹೇಳುತ್ತಿದ್ದಾರೆ. ಪ್ರತಿ ದಿನ ಆಫೀಸಿಗೆ ಹೋಗುವುದು, ವಾಪಸಾಗುವುದು ನಡೆಯುತ್ತಿದೆ. ನ್ಯಾಯಕ್ಕಾಗಿ ಕೋರ್ಟ್ ಮೆಟ್ಟಿಲೇರಿದ ಸತ್ಯಂ. ಅಷ್ಟರಲ್ಲಿ ಸೌತ್ ಸೆಂಟ್ರಲ್ ರೈಲ್ವೆ ಉತ್ತಮ ಚಾಲಕರಿಗೆ ನೀಡುವ ಪ್ರಶಸ್ತಿ ಪ್ರಕಟಿಸಿತು. ಅದರಲ್ಲಿ ಉತ್ತಮ ಚಾಲಕನಾಗಿ ಸತ್ಯಂ ಹೆಸರಿದೆ. ಪ್ರಶಸ್ತಿ ಸಮಾರಂಭಕ್ಕೆ ಕಡ್ಡಾಯವಾಗಿ ಸಂಬಂಧಪಟ್ಟ ರೈಲ್ವೆ ಸ್ಟೇಷನ್‌ನಿಂದ ಗುರುತಿನ ಚೀಟಿ, ಸೇವಾ ಪ್ರಮಾಣಪತ್ರ ಅಗತ್ಯ.

ಪ್ರಶಸ್ತಿ ಪ್ರಕಟಿಸಿದ ಮರುಕ್ಷಣ ಕಾಜಿಪೇಟ್ ಜಂಕ್ಷನ್‌ನಿಂದ ಕರೆ ಬಂದಿತು, ಜಾಯಿನಿಂಗ್ ಲೆಟರ್ ಕೂಡ ನೀಡಿದರು. ಆ ಲೆಟರ್ ಹಿಡಿದು ಕೋರ್ಟಿಗೆ ಹೋದನು. ಕೂಡಲೇ ಕೆಲಸಕ್ಕೆ ಹಾಜರಾಗುವಂತೆ ಆದೇಶ ನೀಡಿದ್ದರೂ, ಪೂರ್ತಿ ವಿಚಾರಣೆಯ ನಂತರ ಸಸ್ಪೆನ್ಷನ್ ಟೈಂ ವೇತನದ ವಿಚಾರ ಹೇಳುತ್ತೇವೆಂದರು. ಏಳು ತಿಂಗಳ ನಂತರ ಇಂದು ಮತ್ತೆ ಕೆಲಸಕ್ಕೆ ಅಂದರೆ ಇಂದೇ ಮೊದಲ ದಿನ. ನನ್ನ ಡ್ಯೂಟಿ ಕೂಡ ಸತ್ಯಂ ಜೊತೆ ಬಹಳ ತಿಂಗಳ ನಂತರ.

ಮುಖದಲ್ಲಿ ಈ ಮೊದಲಿದ್ದ ಸಂತೋಷ, ಉತ್ಸಾಹವಿಲ್ಲ. ಯಾವಾಗಲೂ ಲವಲವಿಕೆಯಿಂದಿರುತ್ತಿದ್ದ ಆತ ಬಹಳ ಬದಲಾಗಿದ್ದಾನೆ, ಏನೋ ಕಳೆದುಕೊಂಡಂತಿದ್ದಾನೆ! ಯಾವಾಗಲೂ ಮಕ್ಕಳ ಶಿಕ್ಷಣದ ಕುರಿತು, ಅವರ ಹವ್ಯಾಸಗಳ ಕುರಿತು ಹೇಳುವ ಸತ್ಯಂ ಇಂದು ಅವರ ಕುರಿತು ಒಂದು ಮಾತೂ ಆಡದಿರುವುದು